# ಹೆಂಡತಿ ಸಂತತಿ ಸಾವಿರವಾಗಲಿ

ನವಕೋಟಿನಾರಾಯಣನೆಂದು ತಮ್ಮ ಶ್ರೀಮಂತಿಕೆಗೆ ಹೆಸರಾಗಿದ್ದವರು ಶ್ರೀನಿವಾಸನಾಯಕರು. ಅವರೋ ಕಡುಲೋಭಿ. ತಮ್ಮ ಮನೆಯಲ್ಲೇ ರೇಷನ್ ಪದ್ಧತಿಯಂತೆ. ಆ ದಿನಕ್ಕೆ ಬೇಕಾಗುವಷ್ಟು ಅಕ್ಕಿ, ಬೇಳೆ ಇತ್ಯಾದಿ ವಸ್ತುಗಳನ್ನು ಅಳೆದು ಕೊಟ್ಟು ಉಗ್ರಾಣಕ್ಕೆ ಬೀಗ ಹಾಕಿಕೊಂಡು ಹೋಗುತ್ತಿದ್ದರಂತೆ. ಅವರ ಪತ್ನಿ ಸರಸ್ವತಿಬಾಯಿಯವರು ಸಾಧ್ವಿಮಣಿ. **ಭಾರ್ಯಾಸಂಹಿತಾ**ದಂತೆ ಪತಿಗೆ ಸಂಧರ್ಭ ಬಂದಾಗಲೆಲ್ಲಾ ತಪ್ಪುಸರಿಗಳ ಬಗ್ಗೆ ಹಿತವಚನ ಹೇಳುತ್ತಿರುತ್ತಾರೆ. ದೇವರು ಕೊಟ್ಟಾಗ ನಾವೂ ಅನುಭವಿಸಬೇಕು, ಇನ್ನೊಬ್ಬರಿಗೂ ದಾನಧರ್ಮ ಮಾಡಬೇಕೆಂದು ಹೇಳುತ್ತಿರುತ್ತಾರೆ. ಧರ್ಮಬೋಧನೆ ನಾಯಕರ ಕಿವಿಯೊಳಗೇ ಹೋಗುತ್ತಿರಲಿಲ್ಲ.

ಒಮ್ಮೆ ಶ್ರೀಹರಿಯು ವೃದ್ಧ ಬಡ ಬ್ರಾಹ್ಮಣನ ವೇಷದಲ್ಲಿ ನಾಯಕರ ನವರತ್ನಗಳ ಅಂಗಡಿಗೆ ಬಂದು ತನ್ನ ಮಗನ ಉಪನಯನಕ್ಕೆ ಧನ ಸಹಾಯ ಮಾಡಬೇಕೆಂದು ಯಾಚಿಸುತ್ತಾನೆ. ಬಡವರನ್ನು ಕಂಡರೆ ಸಿಡಿಮಿಡಿಗುಟ್ಟುತ್ತಿದ್ದ ನಾಯಕರು ತಮ್ಮ 'ನ'ಕಾರಾತ್ಮಕ ಉತ್ತರದಿಂದ ಕಳಿಸಿಬಿಡುತ್ತಾರೆ. ಆ ಭಂಡ ಬ್ರಾಹ್ಮಣ ಸತತವಾಗಿ ಆರು ತಿಂಗಳ ಕಾಲ ನಾಯಕರ ಅಂಗಡಿಗೆ ಅಲೆಯುತ್ತಾನೆ. ಕೊನೆಗೆ ಒಂದು ದಿನ ನಾಯಕರು ಆಳುಗಳ ಕೈಯಲ್ಲಿ ಆ ಬ್ರಾಹ್ಮಣನನ್ನು ದಬ್ಬಿಸಿಬಿಡುತ್ತಾರೆ. ಅಲ್ಲಿಗೆ ಬಿಡದ ಬ್ರಾಹ್ಮಣ ನಾಯಕರ ಪತ್ನಿಯಲ್ಲಿ ಯಾಚಿಸುತ್ತಾನೆ. ಆಕೆ ತನ್ನ ಮೂಗುತಿಯನ್ನೇ ದಾನಮಾಡುತ್ತಾಳೆ. ಬ್ರಾಹ್ಮಣ ನಾಯಕರಲ್ಲಿಗೇ ನೇರ ಬಂದು ಮೂಗುತಿಗೆ ಬೆಲೆಕಟ್ಟಿ ಹಣ ಕೊಡಿರೆಂದೆನ್ನುತ್ತಾನೆ. ಸಂದೇಹ ಬಂದ ನಾಯಕರು ತಕ್ಷಣ ಮನೆಗೆ ಬಂದು ಪತ್ನಿಯಲ್ಲಿ ನಿನ್ನ ಮೂಗುತಿ ತಾ ಎನ್ನುತ್ತಾರೆ. ಭಯಪಟ್ಟ ಸರಸ್ವತಿಬಾಯಿಯವರು ವಿಷಪ್ರಾಷನಕ್ಕೆ ಪ್ರಯತ್ನಿಸುತ್ತಾರೆ. ವಿಷದ ಬಟ್ಟಲಿನಲ್ಲಿ ಸಿಕ್ಕ ಮೂಗುತಿಯನ್ನು ಪತಿಯ ಕೈಗೆ ತಂದುಕೊಡುತ್ತಾರೆ. ಅದನ್ನು ಕಂಡ ನಾಯಕರಿಗೆ ಮೈ ರೋಮಂಚನವಾಯಿತು.

ನಡೆದದ್ದನ್ನು ನೆನೆದು ಏನಾಗಿರಬಹುದೆಂದು ಊಹಿಸಿದರು. ವೈರಾಗ್ಯಶಾಲಿಗಳಾದರು. ಹೆಂಡತಿಯನ್ನು ಕರೆದು "ನೀನು ನನ್ನ ಭಾಗ್ಯದೇವತೆ, ನನ್ನ ಅಜ್ಞಾನವನ್ನು ಪರಿಹರಿಸಿದವಳು" ಎಂದು ಹೊಗಳಿದರು. ಮುಂದೆ ವ್ಯಾಸರಾಯರಲ್ಲಿ ಅಂಕಿತ ಪಡೆದು **ಪುರಂದರದಾಸ**ರಾದಮೇಲೆ ಹಿಂದೆ ತಮಗೆ ಹೆಂಡತಿಯಿಂದ ಆದ ಉಪಕಾರವನ್ನು ಸ್ಮರಿಸಿಕೊಂಡು '**ಹೆಂಡತಿ ಸಂತತಿ ಸಾವಿರವಾಗಲಿ**' ಎಂದು ಹಾರೈಸಿದರು. ಇಲ್ಲಿ ಹೆಂಡತಿ ಎಂದರೆ ಸಂಧರ್ಭೋಚಿತವಾಗಿ ಹಿತನುಡಿಗಳಿಂದ ಧರ್ಮಬೋಧನೆ ಮಾಡುವಂತಹ ನಾರೀಮಣಿ ಎಂದು ತಿಳಿಯಬೇಕು. ಸಂತತಿ ಎಂದರೆ ಮಕ್ಕಳು, ಮೊಮ್ಮಕ್ಕಳು ಎಂದಲ್ಲದೆ ಅವಳಂತಹ ಸ್ತ್ರೀರತ್ನಗಳು ಪ್ರತಿ ತಲೆಮಾರಿನಲ್ಲೂ ಎಂದು ತಿಳಿಯಬೇಕು. ಸಾವಿರವೆಂದರೆ ಅಧಿಕ ಸಂಖ್ಯೆಯಲ್ಲಿ ಎಂದು ತಿಳಿಯಬೇಕು.

ದಾಸರ ಈ ಆಶೀರ್ವಾದ ಸತ್ಯವಾಯಿತು ಎಂದು ತೋರುತ್ತದೆ.

ಮುಂದೆ ಜಗನ್ನಾಥದಾಸರ ಕಾಲದಲ್ಲಿ **ಖರ್ಜಗಿ** ಎಂಬ ಊರಿಗೆ ದಾಸರು ತಮ್ಮ ಶಿಷ್ಯರೊಂದಿಗೆ ಸಂಚಾರ ಬಂದಿರುತ್ತಾರೆ. ಆ ಊರಿನಲ್ಲೇ ದೊಡ್ಡದಾಗಿದ್ದ ಮನೆ ದಾಸಪ್ಪ ಎಂಬವನದು. ಅವನ ಮನೆಯಲ್ಲೇ ದಾಸರಪರಿವಾರಕ್ಕೆ ವಸತಿ ಏರ್ಪಾಟಾಗಿರುತ್ತದೆ. ದಾಸರ ಪರಿವಾರ ಬಂದಾಗ ಆ ಮನೆಯ ಗೃಹಿಣಿ ಗುಂಡಮ್ಮ ಅವರನ್ನೆಲ್ಲಾ ಆದರದಿಂದ ಸ್ವಾಗತಿಸಿ ಉಪಚಾರವನ್ನು ಮಾಡುತ್ತಾಳೆ. ನಗೆಮುಖದ ಮುಖವಾಡ ಹೊತ್ತಿದ್ದರೂ ಹಿರಿಯರುಬಂದಾಗ 'ಮನೆಯ ಯಜಮಾನನೇ ಮನೆಯಲ್ಲಿ ಇಲ್ಲವಲ್ಲಾ' ಎಂದು ಗುಂಡಮ್ಮನ ಮನ ಕೊರಗುತ್ತಿರುತ್ತದೆ.

ಸಂಜೆ ದಾಸರ ಕೀರ್ತನಾ ಕಾರ್ಯಕ್ರಮಕ್ಕೆ ಇನ್ನೂ ಸ್ವಲ್ಪ ಸಮಯವಿದ್ದಾಗ, ಮೀಸೆಹೊತ್ತ ದಾಸಪ್ಪ ವೇಶ್ಯೆ ಮನೆಯಲ್ಲೇ ಊಟಮಾಡಿ, ತಂಬಾಕಿನ ಸಹಿತ ಎಲೆಅಡಿಕೆ ಜಗಿಯುತ್ತಾ ಮನೆಗೆ ಬರುತ್ತಾನೆ. ಬಂದಿದ್ದೇಸಾಕು, ಗುಂಡಮ್ಮ ಅವನನ್ನು ದೂರ ಕರೆದುಕೊಂಡು ಹೋಗಿ ಬಹು ಕಳಕಳಿಯಿಂದ ಪ್ರಾರ್ಥಿಸುತ್ತಾಳೆ – 'ಅಪರೂಪಕ್ಕೆ ಮನೆಗೆ ಜ್ಞಾನಿಗಳು ಬಂದಿದ್ದಾರೆ, ದಯವಿಟ್ಟು ಪುನಃ ಹೊರಗೆ ಹೋಗಬೇಡಿ, ಸಂಜೆ ಕೀರ್ತನಾ ಕಾರ್ಯಕ್ರಮ ಇದೆ' ಎಂದು. ಅವಳ ಕಣ್ಣೀರಿಗೆ ಉತ್ತರವೇನೋ ಎಂಬಂತೆ ದಾಸಪ್ಪ 'ಸರಿ, ಆಗಲಿ' ಎಂದು ಹೇಳಿ, ಮೈ ಹೊಲಸಾಗಿದೆ ಎಂದು ಸ್ನಾನ ಮಾಡಿ ಮೈಗೆ ನಾಮ ಬಳೆದುಕೊಂಡು 'ಕೀರ್ತನಾ' ಕಾರ್ಯಕ್ರಮಕ್ಕೆ ಸಿದ್ಧವಾಗಿದ್ದ ಸ್ಥಳದಲ್ಲಿ ಶ್ರೋತೃಗಳ ಗುಂಪಿನಲ್ಲಿ ಮೊದಲನೇ ಸಾಲಿನಲ್ಲಿ ಕುಳಿತುಕೊಳ್ಳುತ್ತಾನೆ.

ಜಗನ್ನಾಥದಾಸರು 'ಸತತ ಗಣನಾಥ' ಹಾಡಿದಮೇಲೆ ಅವರ ಶಿಷ್ಯರು ಕೀರ್ತನೆಗಳನ್ನು ಹಾಡುವುದು ಪದ್ಧತಿ. ಆದರೆ, ಆದಿನ ದಾಸರ ಶಿಷ್ಯರಾದ ಪ್ರಾಣೇಶದಾಸರು ಗುರುಗಳ ಅಪ್ಪಣೆ ಪಡೆದು ಕಾರ್ಯಕ್ರಮವನ್ನು ತಾವೇ ಆರಂಭಿಸುತ್ತಾರೆ. ಮೊಟ್ಟಮೊದಲಿಗೆ:

ಆದದ್ದಾಯಿತು ಇನ್ನಾದರು ಒಳ್ಳೆ ಹಾದಿ ಹಿಡಿಯೋ ಪ್ರಾಣಿ ।
ಈ ದುರ್ನಡತೆಯಿಂದ ಇಹಪರದಲಿ ಮೋದೆಂದಿಗು ಕಾಣೇ ಪ್ರಾಣೀ ॥

ಎಂದು ದಾಸಪ್ಪ(ದುರಾಚಾರಿಗಳು) ಮಾಡುತ್ತಿದ್ದ ಎಲ್ಲಾ ಅನಾಚಾರಗಳನ್ನೂ ಪಟ್ಟಿಮಾಡಿ ಹೇಳಿಬಿಡುತ್ತಾರೆ. ಅಷ್ಟೇ ಅಲ್ಲದೆ ಒಂದೊಂದು ಸಾಲಿಗೂ ಪ್ರಾಣೇಶದಾಸರು ತಮ್ಮ ಕೈನಿಂದ ದಾಸಪ್ಪನನ್ನೇ ಮೂದಲಿಸುವಂತೆ ತೋರಿಸುತ್ತಿರುತ್ತಾರೆ. ಇದನ್ನು ನೋಡುತ್ತಾ ಕೇಳುತ್ತಿದ್ದ ಗುಂಡಮ್ಮನ ಎದೆಬಡಿತ ಜೋರಾಗುತ್ತದೆ. 'ಗಂಡ ಮೊದಲೇ ಕೋಪಿಷ್ಠ, ದಾಸರು ಬೇರೆ ಹೀಗೆ, ಭಗವಂತ ನೀನೇ ಕಾಪಾಡು' ಎಂದು ಪ್ರಾರ್ಥಿಸತೊಡಗುತ್ತಾಳೆ.

ಜಗನ್ನಾಥದಾಸರು ತಮ್ಮ ಶಿಷ್ಯನನ್ನು ಕುರಿತು "ಇಂದೇಕೆ ಗಣಪತಿಯನ್ನು ಬಿಟ್ಟೆ? ರಾಯರಮೇಲೇಕೆ ಇಷ್ಟುಕೋಪ ನಿನಗೆ?" ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ದಾಸಪ್ಪನೇ ಕೊಡುತ್ತಾನೆ – "ಅವರದೇನೂ ತಪ್ಪಿಲ್ಲರೀ, ಎಲ್ಲಾ ಸರಿಯಾಗೇ

ಹೇಳಿದ್ದಾರೆ.'' ಎಂದು ಹೇಳಿ, ಅದುವರೆವಿಗೂ ತಾನು ತನ್ನ ಜೀವನದಲ್ಲಿ ತಪ್ಪುಹೆಜ್ಜೆ ಹಾಕಿದ್ದಾಗಿ ಒಪ್ಪಿಕೊಂಡು ಇನ್ನು ಮುಂದೆ ಒಳ್ಳೆ ಜೀವನ ನಡೆಸುವುದಾಗಿಯೂ ಹೇಳಿ ತನ್ನನ್ನು ದಾಸಪರಂಪರೆಗೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ. ಗುಂಡಮ್ಮನಲ್ಲಿ ಏಕಾಂತದಲ್ಲಿ ''ನಿನ್ನ ಉಪಕಾರ ನನಗೆ ತುಂಬಾ ಆಯಿತು, ನನ್ನ ಬಾಳ ಬೆಳಕಾದೆ, ನಿನ್ನಿಂದ ನಮ್ಮ ವಂಶದ ಕೀರ್ತಿ ಪ್ರಸಿದ್ಧವಾಯಿತು, ನಾನು ಪಾಪಿ'' ಎಂದು ತಪ್ಪೊಪ್ಪಿಕೊಳ್ಳುತ್ತಾನೆ. ಮರುದಿನ ವೇಶ್ಯೆಯ ಸಹವಾಸ ಸಾಕೆಂದು ಹೇಳಿಕಳುಹಿಸುತ್ತಾನೆ.

ದಾಸಪ್ಪನಿಗೆ ಶಾಸ್ತ್ರೋಕ್ತ ಪ್ರಾಯಶ್ಚಿತ್ತವಾದಮೇಲೆ, ''**ಶ್ರೀದ ವಿಠಲ**'' ಎಂಬ ಅಂಕಿತ ಪಡೆದು, ವೈರಾಗ್ಯಶಾಲಿಯಾಗಿ, ಅಪರೋಕ್ಷಜ್ಞಾನಿ ಕೂಡ ಆದರು **ಖರ್ಜಗಿದಾಸರು**. ಅಂದು ಗುಂಡಮ್ಮ ಗಂಡನನ್ನು ಮನೆಯಲ್ಲಿ ಉಳಿಸಿಕೋಳ್ಳದೇ ಇದ್ದಿದ್ದರೆ, ದಾಸಪ್ಪನ ಬಾಳು ಏನಾಗುತ್ತಿತ್ತೋ?

ಸರಸ್ವತೀಬಾಯಿ ಮತ್ತು ಗುಂಡಮ್ಮನಂತಹ ಸಾಧ್ವಿಯರು ಸಮಾಜದಲ್ಲಿ ಎಷ್ಟೋಜನ ಈಗಲೂ ಇರಬಹುದು, ಆದರೆ ಎಲ್ಲರೂ ಬೆಳಕಿಗೆ ಬರುವುದಿಲ್ಲ. ಈ ಇಬ್ಬರೂ ಸ್ತ್ರೀಯರೂ ಪತ್ನಿಯರಾಗಿ ಪತಿಯ ಬದುಕಿನ ಮಾರ್ಗದ ದಿಕ್ಕನ್ನು ಬದಲಾಯಿಸಿದವರು. ಹಾಗಾದರೆ ಸ್ತ್ರೀಗೆ ತಾಯಿಯಾಗಿ ಜವಾಬ್ದಾರಿ ಇಲ್ಲವೇ? ಅದಕ್ಕೂ ಉದಾಹರಣೆ ಇದೆ.

ಐ ಜಿ ವೆಂಕಟನರಸಿಂಹಾಚಾರ್ಯರು ಶಾಸ್ತ್ರಪಾರಂಗತರು. ಆದರೆ ಮಗ ವೆಂಕಟರಾಮಾಚಾರ್ಯನಿಗೆ ವಿದ್ಯಾಭ್ಯಾಸವೇ ಇಲ್ಲ. ಮುದ್ದಿನ ಮಗನನ್ನು ಆಡಿಕೊಂಡಿರಲೆಂದು ಬಿಟ್ಟು, ತಂದೆ ಅವನ ವಿದ್ಯೆಯಕಡೆ ಗಮನವನ್ನೇ ಹರಿಸಲಿಲ್ಲ. ಆದರೆ ತಾಯಿ ಆತಂಕಪಟ್ಟುಕೊಳ್ಳುತ್ತಿರುತ್ತಾಳೆ. ಸುಮ್ಮನೆ ಉಂಡಾಡಿಕೊಂಡಿರುವ ಮಗನ ಮುಂದಿನ ಜೀವನವೇನೆಂದು ಭಯಪಡುತ್ತಾಳೆ. ಅದೇ ಊರಿನಲ್ಲಿದ್ದ ಗೋಪಾಲದಾಸರು ತ್ರಿಕಾಲಜ್ಞರು. ಅಪರೋಕ್ಷಜ್ಞಾನಿಗಳು. ಅವರಲ್ಲಿ ನಿಮ್ಮ ಮಗನ ಭವಿಷ್ಯವೇನೆಂದು ಕೇಳಿರಿ ಎಂದು ಎಷ್ಟುಹೇಳಿದರೂ ವೆಂಕಟನರಸಿಂಹಾಚಾರ್ಯರು ಕಿವಿಯಮೇಲೇ ಹಾಕಿಕೊಳ್ಳಲಿಲ್ಲ. ''ಇಷ್ಟು ಶಾಸ್ತ್ರ ಓದಿದ ನನಗೇ ಅಪರೋಕ್ಷವಾಗಲಿಲ್ಲ, ಇನ್ನು ದಾಸರಿಗೇನು ಅಪರೋಕ್ಷ?'' ಎಂದು ಅಪಹಾಸ್ಯ ಮಾಡುತ್ತಿದ್ದರು. ಆದರೆ, ಪಟ್ಟುಹಿಡಿದ ಆ ಸಾಧ್ವಿ ಆಚಾರ್ಯರು ಕೂತಲ್ಲಿ ನಿಂತಲ್ಲಿ ಅವರ ಹಿಂದೆ ಮುಂದೆ ಓಡಾಡುತ್ತಾ ಅವರಿಗೆ ಕೇಳಿಸುವಂತೆ ಗೋಪಾಲದಾಸರು ರಚಿಸಿದ ಒಂದು ಪದ್ಯವನ್ನು ಹಾಡುತ್ತಿರುತ್ತಾರೆ. ಆ ಪದ್ಯವು, ಶಾಸ್ತ್ರಸಾರವನ್ನೆಲ್ಲಾ ಸಂಗ್ರಹಿಸಿಟ್ಟ ಮಧುವಿನಂತಹ ಪದ್ಯ:

ವಗತನದಲ್ಲಿ ಸುಖವಿಲ್ಲ । ಅದ ಬಿಡೆನೆಂದರೆ ಬಿಡದಲ್ಲ ।
ಹಗರಣ ಜಗದೊಳು ಮಿಗಿಲಾಯಿತು । ಪನ್ನಗನಗ ನಗರನಿವಾಸ ॥

ಶಾಸ್ತ್ರಜ್ಞರಾದ ಆಚಾರ್ಯರು ಅದನ್ನು ಬಲು ಮೆಚ್ಚಿ, ಮತ್ತೆಮತ್ತೆ ಹೆಂಡತಿ ಕೈಯಲ್ಲಿ ಹಾಡಿಸಿಕೊಂಡು ಕೇಳಿ ಆನಂದಪಡುತ್ತಿರುತ್ತಾರೆ. ಅಂತಹ ಸಂಧರ್ಭವನ್ನು ಉಪಯೋಗಿಸಿಕೊಂಡು ಅವರ ಧರ್ಮಪತ್ನಿ ಮಗನ ಭವಿಷ್ಯವನ್ನು ಗೋಪಾಲದಾಸರಲ್ಲಿ ತಿಳಿದು ಬರುವಂತೆ ಒತ್ತಾಯಮಾಡುತ್ತಾರೆ.

ಬೇರೆ ದಾರಿ ಕಾಣದೆ ಅರ್ಧಮನಸ್ಸಿನಿಂದ ತಮ್ಮ ಹತ್ತಿರ ಬಂದ ಆಚಾರ್ಯರ ಮನದಿಂಗಿತ ಅರಿತ ಗೋಪಾಲದಾಸರು, ವೆಂಕಟರಾಮಾಚಾರ್ಯನ ಬಗ್ಗೆ ಆತಂಕಪಡುವ ಅವಶ್ಯಕವಿಲ್ಲವೆಂದೂ, ಅವನಿಗೆ ಹಿಂದಿನ ಜನ್ಮಗಳ ಪುಣ್ಯದಿಂದ ಕೇವಲ ಶ್ರವಣಮಾತ್ರದಿಂದಲೇ ಜ್ಞಾನ ಮೊಳೆಯುತ್ತದೆಂದೂ, ಮುಂದೆ ಅವನು ಲೋಕವಂದ್ಯನಾಗುವನೆಂದೂ ಆಶ್ವಾಸನೆಕೊಡುತ್ತಾರೆ. ದಾಸರ ಮಾತಿನಲ್ಲಿ ಅತ್ಯಂತ ವಿಶ್ವಾಸವಿದ್ದ ಆಚಾರ್ಯರ ಪತ್ನಿ ಮಗನನ್ನು ಪಾಠವು ನಡಯುವ ಸ್ಥಳದಲ್ಲಿ ಕುಳ್ಳಿರಿಸುತ್ತಿರುತ್ತಾರೆ. ದಾಸರ ಮಾತು ಸತ್ಯವಾಗಿ ಕೇವಲ ಶ್ರವಣಮಾತ್ರದಿಂದ ಅಲ್ಪಕಾಲದಲ್ಲಿಯೇ ವೆಂಕಟರಾಮಾಚಾರ್ಯನು ಪಂಡಿತನಾಗಿ ಪರಮ ವೈರಾಗ್ಯಶಾಲಿಯೂ ಆದನು. ಮುಂದೆ ಯತ್ಯಾಶ್ರಮವನ್ನು ಸ್ವೀಕರಿಸಿ '**ವ್ಯಾಸತತ್ವಜ್ಞ**'ರೆಂಬ ಆಶ್ರಮನಾಮಪಡೆದು '**ವಾಸುದೇವ ವಿಠಲ**' ಎಂಬ ಅಂಕಿತದಿಂದ ದೇವರನಾಮಗಳನ್ನು ರಚಿಸಿದ್ದಾರೆ. ಗದ್ವಾಲ ಸಂಸ್ಥಾನಕ್ಕೆ ಮುಸಲ್ಮಾನ ಶತ್ರುಗಳಿಂದ ಒದಗಿದ ಆಪತ್ತನ್ನು ತಮ್ಮ ತಪಃಸಿದ್ಧಿಯಿಂದ ನಿವಾರಣೆಮಾಡಿದರು. ಸಕಾಲದಲ್ಲಿ ತಾಯಿ ತನ್ನ ಕರ್ತವ್ಯವನ್ನು ಪಾಲಿಸಿದ್ದರಿಂದ ವೈಯುಕ್ತಿಕವಾಗಿ ವೆಂಕಟರಾಮಚಾರ್ಯನಿಗೂ ಹಾಗೂ ಸಮಾಜಕ್ಕೂ ಬಹು ಲಾಭವಾಯಿತು.

ಸರಸ್ವತಿಬಾಯಿ ಮತ್ತು ಗುಂಡಮ್ಮ ಈಚಿನವರಾದರೆ, ಇತಿಹಾಸಕಾಲದಲ್ಲಿಯೂ ತಮ್ಮ ಗಂಡಂದಿರ ತಪ್ಪನ್ನು ತಿದ್ದುವ ಪ್ರಯತ್ನಪಟ್ಟ ಹೆಂಡತಿಯರು ಇದ್ದರು. ಉದಾಹರಣೆಗೆ ತಾರಾ, ಮಂಡೋದರಿ ಮತ್ತು ಗಾಂಧಾರಿ.

ತಾರೆ ವಾಲಿಗೆ, ಸುಗ್ರೀವ ಸಜ್ಜನ, ಅವನನ್ನು ದೇಶದೊಳಗೆ ಸೇರಿಸಿಕೋ, ಅವನ ಹೆಂಡತಿ ರುಮೆಯನ್ನು ಅವನಿಗೆ ಹಿಂದುರುಗಿಸೆಂದು ಹೇಳುತ್ತಾಳೆ. ಅವಳ ಮಾತು ಕೇಳದ ವಾಲಿ, ಸಾಯುವಾಗ ಸುಗ್ರೀವನಿಗೆ ಹೇಳುತ್ತಾನೆ: ''ನಾನು ಸತ್ತನಂತರ ನಿನಗೆ ಪಟ್ಟಾಭಿಷೇಕವಾಗುತ್ತದೆ. ರಾಜ್ಯಪಾಲನೆ ಮಾಡುವಾಗ ಧರ್ಮಸಂಕಟಗಳು ಬಂದರೆ ಈ ತಾರೆಯನ್ನು ಕೇಳು. ಇವಳು ಧರ್ಮಸೂಕ್ಷ್ಮಗಳನ್ನು ಚೆನ್ನಾಗಿ ಅರಿತಿರುವಳು'' ಎಂದು ಪ್ರಶಂಸೆ ಮಾಡುತ್ತಾನೆ. ಈ ಮಾತು ಎಲ್ಲಾ ಸ್ತ್ರೀಯರೂ ಹೆಮ್ಮೆಪಡತಕ್ಕಂತಹುದು. ಆದರೆ ಈ ಭಾಗ್ಯ ಮಂಡೋದರಿಗೆ ಸಿಗಲಿಲ್ಲ. ರಾವಣ ಸೀತೆಯನ್ನು ಅಪಹರಿಸಿಕೊಂಡುಬಂದಾಗ ಇವಳು ಸ್ತ್ರೀರೂಪದ ಮೃತ್ಯು. ಇವಳನ್ನು ಹಿಂತಿರುಗಿಸು ಎಂದಳು. ಸೇತುಬಂಧನ ಸಮಯದಲ್ಲೂ ಇದೇ ಎಚ್ಚರಿಕೆ ಕೊಟ್ಟಳು. ಹೀಗೆಯೇ ಹೆಜ್ಜೆಹೆಜ್ಜೆಗೂ ಎಚ್ಚರಿಸುತ್ತಾ ಬಂದಳು ಆದರೆ ರಾವಣ ಅವಳಮಾತು ಕೇಳಲಿಲ್ಲ, ಅಷ್ಟೇಅಲ್ಲ ಸಾಯುವಾಗ ಕೂಡ

ಮಂಡೋದರಿಯಬಗ್ಗೆ ಒಳ್ಳೆಯ ಮಾತುಗಳನ್ನು ಆಡಲಿಲ್ಲ. ಗಾಂಧಾರಿ ಕೂಡ ಧೃತರಾಷ್ಟ್ರನು ಪಾಂಡವರನ್ನು ಎರಡನೇಯಸಲ ದ್ಯೂತಕ್ಕೆ ಕರೆದಾಗ ಇದು ಕುಲ ನಾಶಕ್ಕೆ ಕಾರಣವಾಗುತ್ತದೆ, ದ್ಯೂತ ಬೇಡವೆಂದಳು.

ಕೆಲವರು ತಮ್ಮ ಪ್ರಯತ್ನದಲ್ಲಿ ಸಫಲರಾದರು, ಮತ್ತೆ ಕೆಲವರು ವಿಫಲರಾದರು. ಇದಕ್ಕೆ ಏನು ಕಾರಣ?

ಶ್ರೀಮನ್ ಮಧ್ವಾಚಾರ್ಯರ ದ್ವೈತ ಸಿದ್ಧಾಂತ ಒಂದೇ ಇದಕ್ಕೆ ಉತ್ತರ ಕೊಡಲು ಶಕ್ಯ. ಅದೇ **ಬೇಧೋಜೀವಗಣಾಃ.** ಆಚಾರ್ಯರ ಸಿದ್ಧಾಂತದ ಪ್ರಕಾರ – ಜೀವರುಗಳಲ್ಲಿ ಸಾತ್ವಿಕರು, ರಾಜಸರು, ತಾಮಸರೆಂದು ಮೂರು ವಿಧ. ಜೀವರಸ್ವಭಾವಕ್ಕೆ ಭವಗಂತ ಕಾರಣವಲ್ಲ. (ಒಂದು ವೇಳೆ ಭಗವಂತನೇ ಕಾರಣನೆಂದರೆ ಅವನು ಪಕ್ಷಪಾತಿ ಎನಿಸಿಕೊಳ್ಳುತ್ತಾನೆ) ಜೀವರು ಎಷ್ಟು ಅನಾದಿಯೋ ಅವರ ಸ್ವಭಾವವೂ ಅಷ್ಟೆ ಅನಾದಿ. ಜೀವ ಸ್ವರೂಪ ಬದಲಾವಣೆಯಾಗದು. ಸಾತ್ವಿಕರು ಸಜ್ಜನರು, ರಾಜಸರು ಮಿಶ್ರ ಜೀವರು, ತಾಮಸರು ದುಷ್ಟಜೀವರು. ಸ್ವಭಾವಕ್ಕೆ ಲಿಂಗಭೇದವಿಲ್ಲ ಎಂದರು.

ಈ ಸಿದ್ಧಾಂತದ ಪ್ರಕಾರ ಮೇಲೆ ನಿರೂಪಿಸಿದ ಉದಾಹರಣೆಗಳಲ್ಲಿ –

೧. ವಾಲಿ ಮೂಲರೂಪದಲ್ಲಿ ಸಾತ್ವಿಕನಾದ ಇಂದ್ರ. ಕಾರಣಾಂತರದಿಂದ ದುಷ್ಟನಂತೆ ತೋರಿದರೂ ಕೊನೆಯಲ್ಲಿ ಪಶ್ಚಾತಾಪ ಪಟ್ಟು ಹೆಂಡತಿಯಲ್ಲಿರುವ ಗುಣವನ್ನು ಗುರುತಿಸಿದನು.

೨. ಶ್ರೀನಿವಾಸನಾಯಕರು ಮೂಲರೂಪದಲ್ಲಿ ಸಾತ್ವಿಕರಾದ ನಾರದರು, ಭಾಗವತೋತ್ತಮ್ಮರು. ಅವರಲ್ಲಿ ಅಡಗಿದ್ದ ಅವರ ಸಹಜ ಸ್ವಭಾವವಾದ ಜ್ಞಾನ, ಭಕ್ತಿ, ವೈರಾಗ್ಯಗಳು ಕೇವಲ ಒಂದು ಮೂಗುತಿಯ ಕಾರಣದಿಂದಾಗಿ ಅಭಿವ್ಯಕ್ತವಾಯಿತು.

೩. ರಾವಣನಾದರೋ ರಾಕ್ಷಸ ಹಿರಣ್ಯಕಶಿಪುವೇ (ಮಹಾಭಾರತ ತಾತ್ಪರ್ಯ ನಿರ್ಣಯ). ಅವನಲ್ಲಿ ಶಾಪಗ್ರಸ್ತನಾದ ಜಯ (ವಿಷ್ಣುವಿನ ದ್ವಾರಪಾಲಕ) ಸುಪ್ತನಾಗಿದ್ದನಷ್ಟೆ. ಆದ್ದರಿಂದ ಅವನ ತಮೋಗುಣವೇ ಅವನು ಪರಿವರ್ತನಾಗದಿದ್ದಕ್ಕೆ ಕಾರಣ.

೪. ಧೃತರಾಷ್ಟ್ರ ಗಂಧರ್ವ ಸ್ವರೂಪದವನಾದರೂ ಕಲಿಯ ಒಂದು ಅಂಶ ಅವನಲ್ಲಿ ಇತ್ತು. ಹಾಗಾಗಿ ಗಾಂಧಾರಿಯ ಸಮಯೋಚಿತ ಮಾತುಗಳು ಕಿವಿಯೊಳಗೇ ಹೋಗುತ್ತಿರಲಿಲ್ಲ.

ನಾವು ಪ್ರತಿದಿನ ನಮ್ಮ ಸುತ್ತಮುತ್ತ ಈ ಎಲ್ಲಾ ತರಹದ ಸ್ವಭಾವದವರನ್ನೂ ನೋಡುತ್ತಿರುತ್ತೇವೆ. ಆದರೆ, ಯಾರ ಮೂಲಸ್ವರೂಪ ಯಾವುದೆಂದು ತಿಳಿಯುವ ಶಕ್ತಿ ನಮಗಿಲ್ಲ. ಹಾಗಾಗಿ ತಪ್ಪು ಕಂಡಾಗಲೆಲ್ಲಾ ನಮಗೂ ಆ ವ್ಯಕ್ತಿಗೂ ಇರುವ ಸಂಬಂಧಕ್ಕೆ ಅನುಗುಣವಾಗಿ ತಿಳುವಳಿಕೆ ಹೇಳಬೇಕಾದದ್ದು ನಮ್ಮ ಕರ್ತವ್ಯ. ತಿದ್ದುಕೊಂಡು ಉದ್ಧಾರವಾಗುವುದು ಬಿಡುವುದು ಆಯಾ ಜೀವರ ಸ್ವರೂಪಕ್ಕೆ ಬಿಟ್ಟದ್ದು ಅಷ್ಟೆ. ಅವರು ಉದ್ಧಾರವಾಗುವ ಸೂಚನೆ ಕಾಣದಿದ್ದರೆ ತಲೆ ಕೆಡಿಸಿಕೊಳ್ಳಬಾರದು. ಅವರವರ ಸಂಪಾದನೆ ಅವರವರ ಖಾತೆಗೆ ಜಮಾ ಆಗುವಂತೆ ಅವರವರ ಸಾಧನೆ ಅವರವರ ಮುಂದಿನ ಜನ್ಮಗಳಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಪಡೆಯಲು ಸಾಧಕವಾಗುತ್ತದೆ.

ಮನೆಮನೆಯಲ್ಲೂ ಸ್ತ್ರೀರತ್ನಗಳು ಬೆಳಕನ್ನು ಬೀರಿ ತಮೋಗುಣವನ್ನು ನೀಗಿ ಮನೆಯವರ ಮತ್ತು ಸಮಾಜದ ಉನ್ನತಿಗೆ ಕಾರಣವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.



----------

೨೦೦೬ನೇ ಫೆಬ್ರುವರಿ ೪, ೫ ಮತ್ತು ೬ ರಂದು, ಚೆನ್ನೈ ನಗರದಲ್ಲಿ, ಅಖಿಲ ಭಾರತ ಮಾಧ್ವ ಮಹಾ ಮಂಡಲವು ೨೫ನೇ ಮಾಧ್ವ ತತ್ವಜ್ಞಾನ ಸಮ್ಮೇಳನವನ್ನು ಏರ್ಪಡಿಸಿತ್ತು. ಅದರಲ್ಲಿನ ಮಹಿಳಾಗೋಷ್ಠಿಯಲ್ಲಿ ಲತಾ ನರಸಿಂಹರಾವ್ ಮಾಡಿದ ಪ್ರವಚನದ ಲೇಖನ.

ತಮ್ಮ ಅನಿಸಿಕೆಗಳನ್ನು  ಇಮ್ಮೈಲ್ ಮುಖಾಂತರ ಕಳುಹಿಸಿ: snrao@qualitysystems.co.in